ಸಾಕ್ಷಿಯನ್ನು ದಿಃ 25.07.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ

4. ನಾನು ಕಳೆದ 20 ವರ್ಷಗಳಿಂದ ಎನ್ ಆರ್ ಮೊಹಲ್ಲಾದಲ್ಲಿ ವಾಸವಾಗಿದ್ದೇನೆ. ನಾನು ಬಿ.ಕಾಂ ಮಾಡಿದ್ದೇನೆ. ಘಟನೆ ನಡೆದ ದಿನ ನಾನು ಸೊಸೈಟ್ ಕೆಲಸದ ನಿಮಿತ್ತ ಬೆಂಗಳೂರಿಗೆ ಹೋಗಿದ್ದೆನು. ಕೆಂಗೇರಿಯಿಂದ ಡೆವೆಲಪರ್ ಬಂದಿದ್ದರು.

ಅವರ ಜೊತೆ ಬೆಂಗಳೂರಿಗೆ ಹೋಗಿದ್ದೆನು. ಕೆಲಸವನ್ನು ಮುಗಿಸಿಕೊಂಡು ನಾನು ಮಧ್ಯಾಹ್ನ 2.30 ಗಂಟೆಗೆ ಸ್ಯಾಟಲೈಟ್ ಬಸ್ ಸ್ಟಾಂಡ್ ಗೆ ಬಂದಿರುತ್ತೇನೆ.

5. ಅಂದು ನಾನು ಹತ್ತಿದ್ದ ಬಸ್ ನಲ್ಲಿ ಸುಮಾರು 50 ರಿಂದ 60 ಜನ ಪ್ರಯಾಣಿ ಮಾಡುತ್ತಿದ್ದರು. ಬಸ್ ನ ಅಕ್ಕಪಕ್ಕ ಸೀಟ್ ಗಳಲ್ಲಿ ಪ್ರಯಾಣಿಕರು ಕುಳಿತಿದ್ದರು. ಟೂಸೀಟರ್ ನಲ್ಲಿ ನಾನು ಕಿಟಕಿ ಪಕ್ಕ ಕುಳಿತಿದ್ದೆನು. ಆ ಬಸ್ ರಶ್ ಇದ್ದ ಕಾರಣ ಕಂಡೆಕ್ಟರ್ ಟಿಕೆಟನ್ನು ಕೊಡಲು ಓಡಾಡುತ್ತಿದ್ದರು , ಆದರೆ ಬಸ್ ತುಂಬಾ ರಷ್ ಇರಲಿಲ್ಲ.

6. ಅಂದು ನನಗೆ ಸಣ್ಣ ಬಾಟಲ್ ನಲ್ಲಿ ಜ್ಯೂಸನ್ನು ಕೊಟ್ಟಿರುತ್ತಾರೆ. ಯಾವುದೇ ಜ್ಯೂಸ್ ನ್ನು ಕುಡಿಯಬೇಕಾದರೆ ಅದರ ಮೇಲೆ ಇರುವ ಅದನ್ನು ತಯಾರು ಮಾಡಿದ ದಿನಾಂಕ ಮತ್ತು ಎಕ್ಸಪೈರಿ ದಿನಾಂಕವನ್ನು ಗಮನಿಸುತ್ತೇನೆ ಎಂದರೆ ಸರಿ. ಆ ಜ್ಯೂಸ್ ಕಿತ್ತಲೆ ಬಣ್ಣದಲ್ಲಿ ಇತ್ತು.

7. ಬೆಂಗಳೂರಿಗೆ ಮೈಸೂರಿಗೆ ಬರಲು ಸುಮಾರು 3 ರಿಂದ 4 ಗಂಟೆ ಸಮಯ ಆಗುತ್ತದೆ. ಬೆಂಗಳೂರಿನಿಂದ ಮೈಸೂರಿಗೆ ಬರಲು ನಡುವೆ 5-6 ಕಡೆ ಸ್ಟಾಪ್ ನ್ನು ಕೊಡುತ್ತಾರೆ. ಆ ಸ್ಥಳಗಳಲ್ಲಿ ಪ್ರಯಾಣಿಕರು ಹತ್ತುವುದರಿಂದ ಕಂಡೆಕ್ಟರ್ ಟಿಕೆಟ್ ಕೊಡಲು ಓಡಾಡುತ್ತಾರೆ. ಆ ದಿನ ನಾನು ಎಷ್ಟು ಹೊತ್ತಿಗೆ ಸಬರ್ಬನ್ ಬಸ್ ಸ್ಟಾಂಡ್ ನ್ನು ತಲುಪಿರುತ್ತೇನೆ ಎನ್ನುವುದು ಗೊತ್ತಾಗಲಿಲ್ಲ. ಆ ದಿನ ನಾನು ಆಟೋದಲ್ಲಿ ಮನೆಗೆ ಹೋಗಿರುತ್ತೇನೆ. ಯಾರೋ ನಮ್ಮ ಮನೆಯವರಿಗೆ ಫೋನ್ ಮಾಡಿ ಕೊಟ್ಟಿರುತ್ತಾರೆ. ನಮ್ಮ ಮನೆಯವರು ಆಟೋದವರಿಗೆ ಅಡ್ರಸ್ ನ್ನು ಹೇಳಿರುತ್ತಾರೆ.

(ಸಾಕ್ಷಿಯನ್ನು ಗಮನಿಸಿದಾಗ ಅವರಿಗೆ ಹುಷಾರಿಲ್ಲದಿರುವುದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ. ಹಾಗೂ ಸಾಕ್ಷಿಯೂ ಸಹ ಆ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ. ಹಾಗಾಗಿ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

**ಓ ಹೇ ಕೇ ಸ ಇ**

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,

ಮೈಸೂರು